ಅಸಲು ದಾವಾ -170/2022
ಪಿ. ಡಬ್ಲೂ- 1

ಸಾಕ್ಷಿಯನ್ನು ದಿನಾಂಕಃ **15-04-2024** ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು**.**
ಪಾಟೀ ಸವಾಲುಃ ಶ್ರೀ ಎ**.**ಎಸ್**.**ವಾಯ್ ಪ್ರತಿ ವಾದಿ ಪರ ವಕೀಲರಿಂದಃ

ದಿಃ 04-02-2021 ರಂದು ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲು ವಾಟ್ನಿ ಆಗಿದೆ ಎಂದರೆ ಸರಿ. ಸದರಿ ಪಾಲು ವಾಟ್ನಿ ಪತ್ರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಆಗಿದೆ ಎಂದರೆ ಸರಿ.

ಸದರಿ ಪಾಲು ವಾಟ್ನಿ ಪತ್ರವನ್ನು ಪಿ.ಡಿ ನೇವನಕ್ಕಿ ಅವರು ದಸ್ತುರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಟ್ನಿ ಪತ್ರ ಕಾಲಕ್ಕೆ ಸಾಕ್ಷಿದಾರರು ಎಂದು ಸುರೇಶ ಕೊಡಗ , ರವಿ ಕದಂ ಇವರು ಹಾಜರು ಇದ್ದರು ಎಂದರೆ , ಸಾಕ್ಷಿ ಸುರೇಶ ಕೊಡಗ ಇವರು ಮಾತ್ರ ಇದ್ದರು ಎಂದು ನುಡಿಯುತ್ತಾರೆ. ಸದರಿ ವಾಟ್ನಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ಈಗಾಗಲೇ ಗುರುತಿಸಲ್ಪಟ್ಟಿರುವ ದಿಃ 05-02-2021 ರ ನೋಂದಾಯಿತ ಖರೀದಿ ಪತ್ರ ( ನಿಪಿ-5 ಎ) ತೋರಿಸಲಾಗಿ ಸಾಕ್ಷಿ ಖಾಲಿ ಪತ್ರದ ಮೇಲೆ ತಮ್ಮ ಸಹಿ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ನಾನು ಸಹಿಯನ್ನು ಇಂಗ್ಲೀಷನಲ್ಲಿ ಮಾಡುತ್ತೇನೆ. ಸಾಕ್ಷಿಗೆ ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-5 ಎ ನಲ್ಲಿ ಇರುವ ಸಹಿ ತೋರಿಸಲಾಗಿ, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು , ಸದರಿ ಸಾಕ್ಷಿ ಸಹಿಯನ್ನು ನಿಡಿ-5 ಎ(ಎ) ಎಂದು ಗುರುತಿಸಲಾಯಿತು.

ದಿಃ 04-02-2021 ರಂದು ಸಾಕ್ಷಿದಾರರ ಸಮಕ್ಷಮ ನಿಪಿ-5 ಎ ನ್ನು ಓದಿ ತಿಳಿದುಕೊಂಡ ನಂತರ ಅದನ್ನು ಉಪನೊಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದೇವೆ ಎಂದರೆ ಸರಿ. ಸದರಿ ವಾಟ್ನಿ ಪತ್ರದ ಪ್ರಕಾರ ಯಾರು -ಯಾರಿಗೆ ಎಷ್ಟು ಆಸ್ತಿ ಹೋಗಬೇಕು ಎಂದು ತಿಳಿದುಕೊಂಡ ನಂತರ ಹಾಗೂ ವಾಟ್ನಿ ಪತ್ರ ತಯಾರಿಸಿದ ನಂತರ ಅದನ್ನು ಓದಿ ,ತಿಳಿದುಕೊಂಡು ಸಾಕ್ಷಿದಾರರ ಸಮಕ್ಷಮ ಸಹಿ ಮಾಡಿದ್ದೇನೆ ಎಂದರೆ ಸರಿ .ಅದರ ನೋಂದಣಿ ಕಾಲಕ್ಕೆ ಉಪ ನೋಂದಣಾಧಿಕಾರಿಯವರು ವಾಟ್ನಿ ಪತ್ರದಲ್ಲಿದ್ದ ಅಂಶಗಳನ್ನು ಓದಿ ತಿಳಿಸಿದ್ದರು ಎಂದು ಸರಿ.

ವಾದಿ ಮತ್ತು ಪ್ರತಿವಾದಿಯರು ಒಟ್ಟಿಗೆ ಇದ್ದೇವೆ. ನಮ್ಮ ಮತ್ತು ಪ್ರತಿವಾದಿಯರ ಮಧ್ಯ ಈಗಾಗಲೇ ಸರಿಯಾದ ಪಾಲು ವಾಟ್ನಿಯಾಗಿದ್ದರಿಂದ ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ಖೊಟ್ಟಿ ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಿ. ಡಬ್ಲ್ಯೂ- 1

ವಾದಿ ಪರ ವಕೀಲರು ಮುಂದುವರೆದ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿ